

# ತುಂಟ ಕೋತಿ

■ ನಾಗೇಂದ್ರ ಚಕ್ರಗಿರಿ
ಕಲೆ: ಮಂಜುನಾಥ್ ಹುಲಕೊಪ್ಪ

ಒಂದಾನೊಂದು ಕಾಡಿನಲ್ಲಿ ಸಿಂಹ, ಹುಲಿ, ಚಿರತೆ, ಕರಡಿ ಮೊದಲಾದ ಪ್ರಾಣಿಗಳು ವಾಸವಾಗಿದ್ದವು. ಅವುಗಳ ಮಧ್ಯೆ ತುಂಟ ಕೋತಿಯೊಂದಿತ್ತು. ಅದರ ತುಂಟತನ ವಿಪರೀತವಾಗಿತ್ತು. ಅದರಿಂದ ಎಲ್ಲ ಪ್ರಾಣಿಗಳೂ ಬೇಸತ್ತು ಹೋಗಿದ್ದವು.

ಸಿಂಹ ಕಾಡಿನಲ್ಲಿ ಓಡಾಡುತ್ತಿರುವಾಗ, ಕೋತಿ ಮೆಲ್ಲನೆ ಹಿಂದಿನಿಂದ ಬಂದು ಅದರ ಬಾಲ ಎಳೆದು, ಸಿಂಹ ಹಿಂತಿರುಗಿ ನೋಡುವಷ್ಟರಲ್ಲಿ ಚಂಗನೆ ನೆಗೆದು ಮರ ಏರಿಬಿಡುತಿತ್ತು. ಹುಲಿ ಮಲಗಿ ಆಕಳಿಸುತಿದ್ದಾಗ ಅದರ ಬಾಯಲ್ಲಿ ಕಲ್ಲು, ಮುಳ್ಳು ಹಾಕಿಬಿಡುತ್ತಿತ್ತು. ಗಾಬರಿಯಿಂದ ಹುಲಿ ಕಣ್ಣುಬಿಟ್ಟು ನೋಡುವುದರೊಳಗೆ ಕೋತಿ ಮಂಗಮಾಯವಾಗಿರುತ್ತಿತ್ತು. ಮರದಿಂದ ಆನೆಯ ಬೆನ್ನ ಮೇಲೆ ಹಾರಿ ಅದರ ಕಿವಿ ಎಳೆಯುವುದು ಕಚ್ಚುವುದನ್ನು ಮಾಡುತ್ತಿತ್ತು. ಆನೆ ಕೋಪದಿಂದ ಸೊಂಡಿಲಾಡಿಸಿ ಕೋತಿಯನ್ನು ಹಿಡಿಯುವುದರೊಳಗೆ ತಪ್ಪಿಸಿಕೊಂಡು ಮತ್ತೆ ಮರಕ್ಕೆ ಹಾರಿಬಿಡುತ್ತಿತ್ತು. ಕರಡಿ ಹಲಸಿನ ಹಣ್ಣು ತಿನ್ನುತ್ತಿರುವಾಗ ತೊಳೆಗಳನ್ನೆಲ್ಲ ಲಪಟಾಯಿಸಿ ಸತಾಯಿಸುತ್ತಿತ್ತು. ಚಿರತೆಗಂತೂ ನಿದ್ದೆ ಮಾಡಲೇ ಬಿಡುತ್ತಿರಲಿಲ್ಲ. ಅದು ಮಲಗಿರುವಾಗ ಅದರ ಮೂಗಲ್ಲಿ, ಕಿವಿಯಲ್ಲಿ ಕಡ್ಡಿ ಆಡಿಸಿ ಕಿರುಕುಳ ಕೊಡುತ್ತಿತ್ತು. ಒಟ್ಟಿನಲ್ಲಿ ಯಾವ ಪ್ರಾಣಿಗಳಿಗೂ ನೆಮ್ಮದಿಯಿರಲಿಲ್ಲ.

ಕಾಡಿನ ಪ್ರಾಣಿಗಳೆಲ್ಲ ಸಿಂಹದ ಮುಂದೆ ತಮ್ಮ ಅಳಲು ತೋಡಿಕೊಂಡವು. ಕೋತಿಯ ಕಾಟದಿಂದ ತನ್ನನ್ನೂ ಸೇರಿ ಕಾಡಿನ ಎಲ್ಲ ಪ್ರಾಣಿಗಳನ್ನೂ ಪಾರುಮಾಡಿ ಅದಕ್ಕೆ ತಕ್ಕ ಬುದ್ಧಿ ಕಲಿಸಲು ಸಿಂಹ ತನ್ನ ಮಂತ್ರಿ ನರಿಗೆ ಸೂಚಿಸಿತು.

ಒಂದು ದಿನ ಕೋತಿಯು ಮಾವಿನ ಮರದ ಮೇಲೆ ಹಣ್ಣು ತಿನ್ನುತ್ತಾ ಕುಳಿತಿತ್ತು. ಅಲ್ಲಿಗೆ ಬಂದ ನರಿ 'ಮಂಗಣ್ಣಾ, ನೀನು ಹೀಗೆ ಬರೀ ಮಾವಿನ ಹಣ್ಣು, ಬಾಳೆ ಹಣ್ಣು ತಿನ್ಕೊಂಡಿದ್ರೆ ನಿನ್ನ ಹೊಟ್ಟೆ ತುಂಬುತ್ತೆ ಅಷ್ಟೇ. ನಾನು ಹೇಳಿದ ಹಾಗೆ ಮಾಡಿದ್ರೆ ನಿನಗೆ ತುಂಬ ಶಕ್ತಿ, ಹೆಚ್ಚು ಚುರುಕುತನ ಬರುತ್ತೆ. ಸಿಂಹದ ಬದಲು ನೀನೇ ಕಾಡಿನ ರಾಜನೂ ಆಗ ಬಹುದು' ಅಂತ ಹೇಳಿತು.

ಕೋತಿಯ ಕಿವಿ ಚುರುಕಾಯ್ತು. 'ನೀನು ಹೇಳುತ್ತಿರುವುದು ನಿಜವೇ ನರಿಯಣ್ಣಾ? ನಾನು ಕಾಡಿನ ರಾಜನಾಗಬಹುದೇ?' ಅಂತ ಕೇಳಿತು.

ನರಿ ನಾನು ಹೇಳಿದ ಹಾಗೆ ಕೇಳಿದರೆ ಖಂಡಿತ ಆಗಬಹುದು ಎಂದು ಹೇಳಿತು. ಕೋತಿ 'ನರಿಯಣ್ಣಾ, ಹೇಳು ಏನು ಮಾಡಬೇಕು, ನೀನು ಹೇಳಿದ ಹಾಗೇ ಮಾಡ್ತೀನಿ ಬೇಗ ಹೇಳು' ಅಂತ ಅವಸರಿಸಿತು.

ಕೋತಿಗೆ ಹಣ್ಣಿನ ಮರಗಳ ಮತ್ತು ತಾನು ಕೀಟಲೆ ಮಾಡಿದ ನಂತರ ಪ್ರಾಣಿಗಳ ಕೈಗೆ ಸಿಗದ ಹಾಗೆ ಜಿಗಿದು ತಪ್ಪಿಸಿಕೊಳ್ಳಲು ಅನುಕೂಲವಾಗುತ್ತಿದ್ದ ದೊಡ್ಡ ದೊಡ್ಡ ಮರಗಳ ಪರಿಚಯ ಮಾತ್ರ ಇತ್ತು. ಸಣ್ಣ ಪುಟ್ಟ ಗಿಡಗಳ ಪರಿಚಯ ಅದಕ್ಕೆ ಇರಲಿಲ್ಲ.

ನರಿ 'ನೋಡು, ಅಲ್ಲೊಂದು ಗಿಡ ಕಾಣ್ತಾ ಇದೆಯಲ್ಲ, ಅದು ಶಕ್ತಿವರ್ಧಕ ಗಿಡ. ಅದರ ಎಲೆಗಳನ್ನು ಕಿತ್ತು, ಚೆನ್ನಾಗಿ ಅರೆದು, ಅದರ ರಸವನ್ನು ಮೈಗೆಲ್ಲಾ ಹಚ್ಚಿಕೋ. ನಿನ್ನ ಶಕ್ತಿ, ಉತ್ಸಾಹ ಎಲ್ಲಾ ಜಾಸ್ತಿಯಾಗಿ ಕುಣಿದಾಡತೊಡಗುವೆ. ನಿನ್ನ ಅಪಾರವಾದ ಶಕ್ತಿಯಿಂದ ನೀನು ಕಾಡಿನ ರಾಜನಾಗುವುದರಲ್ಲಿ ಸಂಶಯವೇ ಇಲ್ಲ' ಎಂದಿತು.

ಕೋತಿ ಖುಷಿಯಾಗಿ ಆ ಗಿಡದ ಬಳಿ ಹೋಗಿ ಸಾಕಷ್ಟು ಎಲೆಗಳನ್ನು ಕಿತ್ತು ಅವನ್ನೆಲ್ಲ ಚೆನ್ನಾಗಿ ಅರೆದು ರಸವನ್ನು ಮೈಗೆ ಹಚ್ಚಿಕೊಂಡಿದ್ದೇ ತಡ ಮೈಯೆಲ್ಲ ಉರಿಯಲು ಶುರುವಾಯ್ತು. ಬರುಬರುತ್ತ ಉರಿ ವಿಪರೀತ ಜಾಸ್ತಿಯಾಗಿ ತಡೆಯಲಾಗದೇ ಅರಚಾಡುತ್ತಾ ಕುಣಿದಾಡಲು ಶುರು ಮಾಡಿತು. 'ಕಾಪಾಡಿ, ಕಾಪಾಡಿ' ಅಂತ ಕೂಗಾಡತೊಡಗಿತು. ಪ್ರಾಣಿಗಳೆಲ್ಲ ಕೋತಿಯ ಸುತ್ತ ನಿಂತು ಕೋತಿಯ ಪರದಾಟ ನೋಡತೊಡಗಿದವು.

ಸಿಂಹ 'ನಿನ್ನ ಮಿತಿ ಮೀರಿದ ಕೀಟಲೆ, ತುಂಟಾಟಗಳಿಂದ ನಾವು ಈ ಕಾಡಿನಲ್ಲಿರುವುದೇ ಕಷ್ಟ ಎನ್ನುವಂತಾಗಿದೆ. ಬೇರೆಯವರಿಗೆ ತೊಂದರೆ ಕೊಟ್ಟರೆ ಅವರ ಪಾಡು ಹೇಗಿರುತ್ತೆ ಅಂತ ನಿನಗೆ ಈಗ ಅರ್ಥವಾಗಿರಬೇಕಲ್ವ?' ಎಂದು ಕೋತಿಗೆ ಕೇಳಿತು.

ಆಗ ಕೋತಿ 'ಮಹಾರಾಜರೇ, ನನ್ನ ತಪ್ಪು ನನಗೆ ಪೂರ್ತಿಯಾಗಿ ಅರ್ಥವಾಗಿದೆ. ನನ್ನ ದುಷ್ಟತನಕ್ಕೆ ತಕ್ಕ ಶಿಕ್ಷೆಯಾಗಿದೆ. ಇನ್ನು ಮುಂದೆ ಯಾರಿಗೂ ತೊಂದರೆ ಮಾಡಲ್ಲ. ಒಳ್ಳೆಯವನಾಗಿರ್ತೀನಿ. ಎಲ್ಲರೂ ನನ್ನನ್ನು ಕ್ಷಮಿಸಿ. ದಯವಿಟ್ಟು ಹೇಗಾದರೂ ಮಾಡಿ ಈ ಉರಿ, ಹಿಂಸೆಯಿಂದ ನನ್ನನ್ನು ಪಾರು ಮಾಡಿ'. ಎಂದು ಅಂಗಲಾಚಿತು.

ಆಗ ಹುಲಿ 'ಮಹಾರಾಜರೇ, ಕೋತಿ ತನ್ನ ತಪ್ಪಿಗೆ ಪಶ್ಚಾತ್ತಾಪ ಪಟ್ಟಿದೆ. ಒಂದು ಬಾರಿ ಕ್ಷಮಿಸೋಣ' ಎಂದಿತು.

ಎಲ್ಲ ಪ್ರಾಣಿಗಳೂ ಹುಲಿಯ ಮಾತು ಅನುಮೋದಿಸಿದವು. ಸಿಂಹ ಕೋತಿಯನ್ನು ಕ್ಷಮಿಸಿ, ಆನೆಯ ಕಡೆ ನೋಡಿತು. ಕೂಡಲೆ ಆನೆ ಪಕ್ಕದಲ್ಲಿದ್ದ ಕೊಳದಿಂದ ಸೊಂಡಿನಲ್ಲಿ ನೀರು ತುಂಬಿಕೊಂಡು ಬಂದು ಕೋತಿಯ ಮೇಲೆ ರಭಸದಿಂದ ಸುರಿಯಿತು. ಕೋತಿಯ ಮೈಗೆ ಅಂಟಿದ್ದ ರಸವೆಲ್ಲಾ ತೊಳೆದುಹೋಗಿ ಅದಕ್ಕೆ ಹಾಯೆನಿಸತೊಡಗಿತು. ಸ್ವಲ್ಪ ಹೊತ್ತಿನಲ್ಲೇ ಅದರ ಉರಿಯೆಲ್ಲ ಸಂಪೂರ್ಣವಾಗಿ ಮಾಯವಾಯಿತು.

■